BKN-35-V

Sl.No. :

Total No. of Pages : 3

ತೃತೀಯ ವರ್ಷದ ಬಿ.ಎ. ಪದವಿ ಪರೀಕ್ಷೆ, ಮೇ/ಜೂನ್- 2025

(SLM Scheme)

ಐಚ್ಛಿಕ ಕನ್ನಡ (ಪತ್ರಿಕೆ–5)

(ಹಳಗನ್ನಡ ವ್ಯಾಕರಣ (ಶಬ್ದಮಣಿದರ್ಪಣಂ) ಮತ್ತು ಕನ್ನಡ ಭಾಷೆಯ ಚರಿತ್ರೆ)

ಸಮಯ : 3 ಗಂಟೆಗಳು **ಗರಿಷ್ಠಾಂಕಗಳು : 80**

ಸೂಚನೆ : *ಎಲ್ಲಾ ಪ್ರಧಾನ ಪ್ರಶ್ನೆಗಳೂ ಕಡ್ಡಾಯ.*

ವಿಭಾಗ–ಎ

(ಹಳಗನ್ನಡ ವ್ಯಾಕರಣ (ಶಬ್ದಮಣಿದರ್ಪಣಂ) (20 ಅಂಕಗಳು)

ಪ್ರ1) ಎರಡು ಸೂತ್ರಗಳನ್ನು ಸೋದಾಹರಣವಾಗಿ ವಿವರಿಸಿ. **[2×5=10]**

೧) ತನು ವಾದ್ಯಂ ನಾಲಗೆ ವಾ
ದನದಂಡಂ ಕರ್ತೃವಾತ್ಮನವನ ಮನೋವೃ
ತ್ತಿನಿಮಿತ್ತಮಾಗಿ ಶಬ್ದಂ
ಜನಿಯಿಸುಗುಂ ಧವಲವರ್ಣಮಕ್ಷರ ರೂಪಂ.

೨) ಕವಿಗಳ್ ಸ್ವರದಿಂ ವರ್ಗದಿ
ನವರ್ಗದಿಂ ಯೋಗವಾಹದಿಂ ದೇಶಿಯೊಳು
ದ್ಭವಮಪ್ಪ ವರ್ಣದಿಂ ಪಂ
ಚವಿಧಂ ತಾನೆಂದು ತಿಳಿಪುವರ್ ಶುದ್ಧಗೆಯಂ.

೩) ಕ್ರಿಯೆಯಂ ನುಡಿಯದುದು ವಿಭ
ಕ್ತಿಯನಿಲ್ಲದುದರ್ಥಮುಳ್ಳುದಂತದು ಲಿಂಗಂ
ನಿಯತ ಚತುರ್ಭೇದಮದಾ
ರಯೆ ಕೃತ್ತದ್ಧಿತ ಸಮಾಸನಾಮ ಸ್ಥಿತಿಯಿಂ.

೪) ಸಂದ ಪಕಾರಕ್ಕೆ ಹಕಾ
ರಂ ದೊರೆಕೊಳ್ಗುಂ ವಿಕಲ್ಪದಿಂ ಸಂಯೋಗಂ
ಸಂದಿಸಿದೊಡೆ ದುಷ್ಕರಮದು
ಸುಂದರಮಾ ದೇಶಿಯಿಂದಮೆಂಬರ್ ವಿಬುಧರ್.

ಪ್ರ2) ಎರಡು ಸೂತ್ರ ವಾಕ್ಯಗಳನ್ನು ವಿವರಿಸಿ. **[2×2½=5]**

೧) ಕುಳದ ನಿಯಮದೊಳೆಂದು ಕ್ಷಳಕ್ಕೆ ಲಾಕ್ಷರ ವಿಕಲ್ಪಮಿಲ್ಲ.

೨) ಆದರಿಪರ್ ಕೆಲಬರ್ ದೀರ್ಘಾದೇಶಮನಗ್ರದಲ್ಲಿ.

೩) ದ್ವಿವಚನಮುಚಿತದೆ ಬರ್ಕುಂ.

೪) ಬೆಳೆಯೆಂಬ ಧಾತು ಸಸ್ಯಾವಳಿಯಾಳ್.

ಪ್ರ3) ಎರಡರ ವ್ಯಾಕರಣ ವಿಶೇಷ ಬರೆಯಿರಿ. **[2×2½=5]**

೧) ಅರಸನತ್ತಣಿ ದಾಳಿ ಬಂದುದು

೨) ಬಡವರ ಪಿತರರಂತೆ ಮರುಗುತಿರ್ಕುಂ

೩) ಅಯ್ಯೋ ಅಕ್ಕಟಾ ಇಂದ್ರಂಗೆ ಕೇಡಾಯ್ತೆ.

೪) ಅಮರಾಂಗನೆಯರ್ ಜೋಯೆಂದು ಪಾಡಿದರ್ ಜೋಗುಳಮಂ.

ವಿಭಾಗ–ಬಿ

(ಹಳಗನ್ನಡ ವ್ಯಾಕರಣ (ಶಬ್ದಮಣಿದರ್ಪಣಂ)) (30 ಅಂಕಗಳು)

ಪ್ರ4) ಒಂದು ಪ್ರಶ್ನೆಗೆ ಉತ್ತರಿಸಿ. **[1×10=10]**

೧) ಕೇಶಿರಾಜನು ಹೇಳುವ ಕನ್ನಡ ಶುದ್ಧಗೆಯನ್ನು ಕುರಿತು ಚರ್ಚಿಸಿ.

೨) ಸಂಧಿ ಎಂದರೇನು? ಕೇಶಿರಾಜನು ಹೇಳುವ ಸಂಧಿಯ ವಿಧಗಳನ್ನು ಸೋದಾಹರಣವಾಗಿ ವಿವರಿಸಿ.

ಪ್ರ5) ಒಂದು ಪ್ರಶ್ನೆಗೆ ಉತ್ತರಿಸಿ. **[1×10=10]**

೧) 'ಲಿಂಗಮೊಂಬತ್ತು ತೆಱಂ' ಕೇಶಿರಾಜನ ಈ ಹೇಳಿಕೆಯನ್ನು ಚರ್ಚಿಸಿ.

೨) ಸಮಾಸವೆಂದರೇನು? ಅದರ ಬಗೆಗಳನ್ನು ಉದಾಹರಣೆ ಸಹಿತ ವಿವರಿಸಿ.

ಪ್ರ6) ಎರಡನ್ನು ಕುರಿತು ಟಿಪ್ಪಣಿ ಬರೆಯಿರಿ. **[2×5=10]**

೧) ಶ್ರುತಿಕಷ್ಟ ಸಂಧಿ

೨) ಆಖ್ಯಾತ ಪ್ರಕರಣ

೩) ವಿಭಕ್ತಿ ಪಲ್ಲಟ

೪) ತದ್ಧಿತನಾಮ

ವಿಭಾಗ–ಸಿ

(ಕನ್ನಡ ಭಾಷೆಯ ಚರಿತ್ರೆ) (30 ಅಂಕಗಳು)

ಪ್ರ7) ಒಂದು ಪ್ರಶ್ನೆಗೆ ಉತ್ತರಿಸಿ. **[1×10=10]**

೧) ಭಾಷೆ ಎಂದರೇನು? ಭಾಷೆಯ ಉಗಮ ಮತ್ತು ವಿಕಾಸದ ಬಗ್ಗೆ ಬರೆಯಿರಿ.

೨) ಭಾಷಾ ವರ್ಗೀಕರಣದ ವಿಧಾನಗಳು ಯಾವುವು? ವಿವರಿಸಿ.

ಪ್ರ8) ಒಂದನ್ನು ಕುರಿತು ಟಿಪ್ಪಣಿ ಬರೆಯಿರಿ. **[1×5=5]**

೧) ಇಂಡೋಯುರೋಪಿಯನ್ ಭಾಷಾ ಪರಿವಾರ

೨) ಕನ್ನಡ ನಾಡು ನುಡಿಯ ಪ್ರಾಚೀನತೆ

೩) ಪೂರ್ವದ ಹಳಗನ್ನಡ

ಪ್ರ9) ಒಂದು ಪ್ರಶ್ನೆಗೆ ಉತ್ತರಿಸಿ. **[1×10=10]**

೧) ದಕ್ಷಿಣ ದ್ರಾವಿಡ ಭಾಷಾ ಪರಿವಾರದ ಪ್ರಮುಖ ಭಾಷೆಗಳು ಯಾವುವು? ಸಂಕ್ಷಿಪ್ತವಾಗಿ ವಿವರಿಸಿ.

೨) ಕನ್ನಡ ಭಾಷೆಯ ವಿವಿಧ ಹಂತಗಳು ಯಾವುವು? ವಿದ್ವಾಂಸರ ಅಭಿಪ್ರಾಯಗಳ ಹಿನ್ನೆಲೆಯಲ್ಲಿ ವಿವರಿಸಿ.

ಪ್ರ10) ಒಂದನ್ನು ಕುರಿತು ಟಿಪ್ಪಣಿ ಬರೆಯಿರಿ. **[1×5=5]**

೧) ನಾಮಪದಗಳು

೨) ವಚನ

೩) ಅಗಸ, ಆಸ್ಪತ್ರೆ, ಕಬ್ಬಿಣ, ಸೀರೆ ಇವುಗಳನ್ನು ಭಾಷಾಶಾಸ್ತ್ರದ ದೃಷ್ಟಿಯಿಂದ ವಿವರಿಸಿ.

